## ಕಟಾವು ಮತ್ತು ಒಕ್ಕಣೆ ಯಂತ್ರಗಳೆರಡನ್ನೂ ಬಳಸುವುದರ ಲಾಭ

### ಉತ್ಪಾದನಾ ವೆಚ್ಚ







### ವೆಚ್ಚದ ಉಳಿತಾಯ

ಎಕರೆಗೆ ರೂ. 8200

ಕ್ವಿಂಟಾಲ್‌ಗೆ ರೂ. 565

ಶೇಕಡವಾರು → 30%

ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಗೆ ಕೇಂದ್ರದ ಬೆಂಬಲ ಬೆಲೆ ಮೇಲೆ ರೂ. 450 ಪ್ರೋತ್ಸಾಹಧನ ನೀಡಿ ಕ್ವಿಂಟಾಲ್‌ಗೆ 2100 ರಂತೆ ಖರೀದಿಸಿದ್ದು, ಯಂತ್ರಗಳನ್ನು ಬಳಸಿದರೆ ರೈತ ಬರಿಸುವ ಉತ್ಪಾದನಾ ವೆಚ್ಚ ಇಳಿದು ಬೆಂಬಲ ಬೆಲೆ ಲಾಭವಾಗಲಿದೆ.

### ರಾಜ್ಯ ಸರ್ಕಾರದ ಕ್ರಮಗಳು

ಅ) **ಕೃಷಿ ಯಾಂತ್ರೀಕರಣ:** ಪವರ್ ಟಿಲ್ಲರ್, ಭೂಮಿ ಸಿದ್ಧತೆ, ಬಿತ್ತನೆ ಮತ್ತು ಅಂತರ ಬೇಸಾಯಕ್ಕೆ ಕೃಷಿ ಯಂತ್ರೋಪಕರಣಗಳು, ಡೀಸೆಲ್ ಪಂಪ್ ಸೆಟ್‌ಗಳು, ಟ್ರ್ಯಾಕ್ಟರ್ / ಟಿಲ್ಲರ್ / ಯಂತ್ರ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಕಟಾವು, ಒಕ್ಕಣೆ ಕೃಷಿ ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ರೈತರಿಗೆ ಸಹಾಯಧನ ನೀಡಲಾಗುತ್ತಿದೆ.

ಆ) **ಕೃಷಿ ಯಂತ್ರಧಾರೆ:** ಕೃಷಿ ಯಂತ್ರೋಪಕರಣಗಳ ಬಾಡಿಗೆ ಸೇವಾ ಕೇಂದ್ರಗಳಲ್ಲಿ ರೈತರಿಗೆ ಸಕಾಲದಲ್ಲಿ ಮತ್ತು ಕಡಿಮೆ ದರದಲ್ಲಿ ಬಾಡಿಗೆಗೆ ಯಂತ್ರೋಪಕರಣಗಳನ್ನು ಒದಗಿಸಲಾಗುತ್ತಿದೆ. ಈಗಾಗಲೇ 175 ಕೇಂದ್ರಗಳು ಕಾರ್ಯಪ್ರವೃತ್ತವಾಗಿದ್ದು, ಸದ್ಯದಲ್ಲೇ 315 ಅಧಿಕ ಕೇಂದ್ರಗಳನ್ನು ತೆರೆಯಲು ತೀರ್ಮಾನಿಸಲಾಗಿದೆ.

ಇ) **ಕರ್ನಾಟಕ ಕೃಷಿ ಬೆಲೆ ಆಯೋಗ:** ಕೃಷಿ ಯಂತ್ರಗಳ ಬಳಕೆಯಿಂದಾಗುವ ವೆಚ್ಚದ ಉಳಿತಾಯ ಮತ್ತು ಆರ್ಥಿಕದಾಯಕತೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಿರುತ್ತದೆ. ಇವುಗಳ ವ್ಯಾಪಕ ಬಳಕೆಗೆ ಸಮಗ್ರ ಕಾರ್ಯ ಯೋಜನೆ ರೂಪಿಸಲು ಬೆಲೆ ಆಯೋಗ ಕಾರ್ಯೋನ್ಮುಖವಾಗಿದೆ.


ಎಂ. ಮಹೇಶ್ವರ್ ರಾವ್, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು

ಪಾಂಡುರಂಗ. ಬಿ. ನಾಯಕ, ಭಾ.ಆ.ಸೇ.
ಕೃಷಿ ಆಯುಕ್ತರು

ಬಿ. ವೈ. ಶ್ರೀನಿವಾಸ್
ಕೃಷಿ ನಿರ್ದೇಶಕರು


ಹೆಚ್ಚಿನ ಮಾಹಿತಿಗಾಗಿ ಸಮೀಪದ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರೈತ ಸಂಪರ್ಕ ಕೇಂದ್ರ, ರೈತ ಸಹಾಯವಾಣಿ – 1800– 4253553, ಕಿಸಾನ್ ಕರೆ ಕೇಂದ್ರ 1800 – 1801551 ಸಂಪರ್ಕಿಸಿ.

ಕರ್ನಾಟಕ ಕೃಷಿ ಬೆಲೆ ಆಯೋಗ

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಕೃಷಿ ಇಲಾಖೆ

# "ಯಂತ್ರ ಬಳಸಿ ವೆಚ್ಚ ಇಳಿಸಿ"



# ರಾಗಿ ಬೇಸಾಯದಲ್ಲಿ ಯಾಂತ್ರೀಕರಣದ ಲಾಭದಾಯಕತೆ






ಉತ್ಪಾದನಾ ವೆಚ್ಚದ ವಿವರ

ಮೇ 2016

## ಮುನ್ನುಡಿ

ಕೃಷಿಯಲ್ಲಿ ಕಾರ್ಮಿಕರ ಕೊರತೆ ಹೆಚ್ಚಾಗಿ ಕೂಲಿ ದರ ದಿನೇ ದಿನೇ ಏರುತ್ತಲಿದ್ದು, ಉತ್ಪಾದನಾ ವೆಚ್ಚ ಅಧಿಕವಾಗುತ್ತಿದೆ. ಕೃಷಿ ಲಾಭದಾಯಕತೆ ಮೇಲೆ ಇದು ತೀವ್ರ ಪರಿಣಾಮ ಬೀರಿದ್ದು ಕೃಷಿಯಲ್ಲಿ ಯಂತ್ರಗಳನ್ನು ಬಳಸುವುದು ಇದಕ್ಕೆ ಸೂಕ್ತ ಪರಿಹಾರ. ಯಾಂತ್ರೀಕರಣದಿಂದ ಕಾರ್ಮಿಕರ ಮೇಲಿನ ಅವಲಂಬನೆ ಕಡಿಮೆಯಾಗಿ ಉತ್ಪಾದನಾ ವೆಚ್ಚ ಇಳಿದು ಬೇಸಾಯ ಲಾಭದಾಯಕವಾಗಲಿದೆ. ಹಾಗೇ, ಉತ್ಪಾದಕತೆ ಸಹ ಅಧಿಕವಾಗಲಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಉಳುಮೆಯಿಂದ ಕೊಯ್ಲಿನವರೆಗೆ ಉಪಯುಕ್ತವಿರುವ ಹಲವಾರು ಯಂತ್ರಗಳನ್ನು ರಿಯಾಯ್ತಿ ದರದಲ್ಲಿ ರೈತರಿಗೆ ವಿತರಿಸುತ್ತಿದೆ. ಹಾಗೇ, **"ಕೃಷಿ ಯಂತ್ರಧಾರೆ"** ಯೋಜನೆಯಡಿ ಬಾಡಿಗೆ ಆಧಾರದಲ್ಲಿ ಇವುಗಳ ಸೇವೆಯನ್ನೂ ಕಡಿಮೆ ದರದಲ್ಲಿ ಒದಗಿಸುತ್ತಲಿದೆ.

ಕೃಷಿಯಲ್ಲಿ ಯಂತ್ರಗಳ ಬಳಕೆಯಿಂದ ಸಕಾಲದಲ್ಲಿ ಸರಿಯಾದ ರೀತಿಯಲ್ಲಿ ಬೇಸಾಯ ಕೈಗೊಳ್ಳಬಹುದಾಗಿದ್ದು ಆ ಮೂಲಕ ಅಧಿಕ ಲಾಭ ದೊರಕಲಿದೆ. **ಕರ್ನಾಟಕ ಕೃಷಿ ಬೆಲೆ ಆಯೋಗ** ಪ್ರಮುಖ ಬೆಳೆಗಳ ಬೇಸಾಯದಲ್ಲಿ ನಾಟಿ, ಕಟಾವು, ಒಕ್ಕಣೆ ಮುಂತಾದ ಕಾರ್ಯಗಳಲ್ಲಿ ಯಂತ್ರಗಳ ಬಳಕೆಯಿಂದಾಗುವ ವೆಚ್ಚದ ಉಳಿತಾಯ ಹಾಗೂ ಲಾಭದಾಯಕತೆಯನ್ನು ಲೆಕ್ಕಾಚಾರ ಹಾಕಿರುತ್ತದೆ.

- ರಾಗಿ, ಭತ್ತ, ತೊಗರಿ ಬೆಳೆಗಳಲ್ಲಿ ವಿವಿಧ ಕೃಷಿ ಚಟುವಟಿಕೆಗಳಲ್ಲಿ ಯಂತ್ರೋಪಕರಣಗಳನ್ನು ಬಳಸಿದರೆ ಶೇ.40 ರಷ್ಟು ವೆಚ್ಚದ ಉಳಿತಾಯವಾಗಲಿದೆ.
- **ಭತ್ತದ ಬೇಸಾಯದಲ್ಲಿ ನಾಟಿ ಯಂತ್ರದ ಬಳಕೆಯಿಂದ ವೆಚ್ಚದ ಇಳಿಕೆ ಮಾತ್ರವಲ್ಲ, ಶೇ. 70 ರಷ್ಟು ಬೀಜ ಮತ್ತು ಶೇ.25 ರಷ್ಟು ರಸಗೊಬ್ಬರ ಉಳಿತಾಯ ಮತ್ತು ಶೇ.15 ರಷ್ಟು ಇಳುವರಿ ಹೆಚ್ಚಳ ಆಗಲಿದೆ.**
- ಪವರ್ ಟಿಲ್ಲರ್ ಚಾಲನೆಯ ಕಟಾವು ಯಂತ್ರ ಬಳಸಿ ರಾಗಿ ಬೆಳೆಯನ್ನು ಕೊಯ್ಲು ಮಾಡುವುದರಿಂದ ಶೇಕಡ 56ರಷ್ಟು ಸಮಯ ಮತ್ತು ಶೇಕಡ 88ರಷ್ಟು ಕೃಷಿ ಕಾರ್ಮಿಕರ ಬಳಕೆ ಕಡಿಮೆಯಾಗುತ್ತದೆ.
- ಹಲವು ಬೆಳೆಗಳಲ್ಲಿ ಯಂತ್ರಗಳ ಬಳಕೆಯಿಂದ ರೈತ ಬರಿಸುವ ಉತ್ಪಾದನಾ ವೆಚ್ಚ (Cost $A_1$) ಗಮನಾರ್ಹವಾಗಿ ಇಳಿದು ಬೆಂಬಲ ಬೆಲೆ ಲಾಭದಾಯಕವಾಗಲಿದೆ.

ಕರ್ನಾಟಕ ಸರ್ಕಾರದ ಕೃಷಿ ಯಾಂತ್ರೀಕರಣದೆಡೆಗಿನ ಈ ವಿಸ್ತೃತ ಕಾರ್ಯಯೋಜನೆಯನ್ನು ಕೇಂದ್ರ ಸರ್ಕಾರದ **ಕೃಷಿ ವೆಚ್ಚ ಮತ್ತು ಬೆಲೆ ಆಯೋಗ** (Commission for Agricultural Costs and Prices-CACP) ಶ್ಲಾಘಿಸಿ ತನ್ನ 2016-17 ರ ಮುಂಗಾರು ಬೆಳೆಗಳ ಬೆಲೆ ನೀತಿಯ ಮೇಲಿನ ವರದಿಯಲ್ಲಿ ಉಲ್ಲೇಖಿಸಿರುತ್ತದೆ. ಸರ್ಕಾರದ ಈ ಯೋಜನೆಗಳ ಉಪಯೋಗ ಪಡೆದು ಕೃಷಿ ಉತ್ಪಾದನಾ ವೆಚ್ಚ ತಗ್ಗಿಸಿ ಆದಾಯ ಅಧಿಕಗೊಳಿಸಲು ರೈತರಿಗೆ ಈ ಕಿರುಹೊತ್ತಿಗೆ ಪ್ರೇರಣೆ ಒದಗಿಸುವುದೆಂದು ಹಾರೈಸಲಾಗಿದೆ. ಕರ್ನಾಟಕದ ಕೃಷಿ ಯಾಂತ್ರೀಕರಣದ ಈ ಯೋಜನೆ ದೇಶಕ್ಕೆ ಮಾದರಿಯಾಗಲೆಂದು ಆಶಿಸಲಾಗಿದೆ.

**ಡಾ. ಟಿ ಎನ್. ಪ್ರಕಾಶ್ ಕಮ್ಮರಡಿ**
ಅಧ್ಯಕ್ಷರು,
ಕರ್ನಾಟಕ ಕೃಷಿ ಬೆಲೆ ಆಯೋಗ

**ಬೆಂಗಳೂರು**
**ಮೇ 2016**

## ರಾಗಿ ಕಟಾವು ಯಂತ್ರದ ಲಾಭದಾಯಕತೆ



## ರಾಗಿ ಒಕ್ಕಣೆ ಯಂತ್ರದ ಲಾಭದಾಯಕತೆ



### ಉಪಯುಕ್ತತೆ

**ರಾಗಿ ಕಟಾವು ಯಂತ್ರ:**

- **ಕೃಷಿ ಯಂತ್ರಧಾರ** ಸೇವಾ ಕೇಂದ್ರಗಳಲ್ಲಿ ಲಭ್ಯವಿದ್ದು, ಗಂಟೆಗೆ ಸುಮಾರು ರೂ.700 ರಷ್ಟು ದರವಿರುತ್ತದೆ.
- **ಒಂದು ಕಾಲು ಗಂಟೆಯಲ್ಲಿ 2 ರಿಂದ 3 ಲೀಟರ್ ಇಂಧನ ಬಳಸಿ ಒಂದು ಎಕರೆ ಪ್ರದೇಶದ ಬೆಳೆ ಕಟಾವು ಮಾಡಬಹುದು.**
- ಇದೇ ಕಾರ್ಯಕ್ಕೆ ಎಕರೆಗೆ 10 ರಿಂದ 12 ಕಾರ್ಮಿಕರು ದಿನವಿಡೀ ಶ್ರಮಿಸಬೇಕಾಗುವುದು.
- ಒಂದು ಯಂತ್ರದ ಮೂಲಕ ದಿನಕ್ಕೆ 8 ರಿಂದ 10 ಎಕರೆ ಕಟಾವು ಮಾಡಬಹುದು.
- ಸಾಮಾನ್ಯ ರೈತರೂ ಖರೀದಿಸಿ, ಸ್ವತಃ ಬಳಸಬಹುದು ಮತ್ತು ಇತರಿಗೆ ಬಾಡಿಗೆಗೆ ನೀಡಬಹುದು.

**ಕಟಾವು ವೆಚ್ಚದ ಉಳಿತಾಯ**

ಉಳಿತಾಯ

46%

**ರಾಗಿ ಒಕ್ಕಣೆ ಯಂತ್ರ:**

- **ಕೃಷಿ ಯಂತ್ರಧಾರ** ಸೇವಾ ಕೇಂದ್ರಗಳಲ್ಲಿ ಲಭ್ಯವಿದ್ದು, ಗಂಟೆಗೆ ಸುಮಾರು ರೂ.450 ದರವಿರುತ್ತದೆ.
- **ಸುಮಾರು ಎರಡು ಗಂಟೆಯಲ್ಲಿ ಒಂದು ಎಕರೆ ಪ್ರದೇಶದ ಬೆಳೆ ಒಕ್ಕಣೆ ಮಾಡಬಹುದು.**
- ಇದೇ ಕಾರ್ಯಕ್ಕೆ ಎಕರೆಗೆ 5 ರಿಂದ 6 ಕಾರ್ಮಿಕರು ದಿನ ವಿಡೀ ಶ್ರಮಿಸಬೇಕಾಗುವುದು.
- ಒಂದು ಯಂತ್ರದ ಮೂಲಕ ದಿನಕ್ಕೆ 6 ರಿಂದ 8 ಎಕರೆ ಒಕ್ಕಣೆ ಮಾಡಬಹುದು.
- ಬೇಕಾದೆಡೆ ಸುಲಭವಾಗಿ ಸಾಗಾಣಿಕೆ ಮಾಡಿ ಸರಳವಾದ ರೀತಿಯಲ್ಲಿ ಬಳಸಬಹುದು.

**ಒಕ್ಕಣೆ ವೆಚ್ಚದ ಉಳಿತಾಯ**

ಉಳಿತಾಯ

49%

### ಅನಾನುಕೂಲತೆ

ಕಲ್ಲು ಭೂಮಿಯಲ್ಲಿ ಕಟಾವು ಕಷ್ಟವಾಗಿದ್ದು, ಮೇವು ಸ್ವಲ್ಪ ಕಡಿಮೆಯಾಗಬಹುದು.

ಒಕ್ಕಣೆಯಲ್ಲಿ ಸ್ವಲ್ಪ ಪ್ರಮಾಣದ ಹುಲ್ಲು ನಷ್ಟವಾಗಬಹುದು.